**ಕರ್ನಾಟಕ ಸರ್ಕಾರ**

**ತೋಟಗಾರಿಕೆ ಇಲಾಖೆ**

ಸಂಖ್ಯೆ:ತೋಇ:ಸತೋನಿ:ಲಾತಕೇ:ಸತೋಅ:12 :2017-18

ಸಹಾಯಕ ತೋಟಗಾರಿಕೆ ನಿರ್ದೇಶಕರ ಕಛೇರಿ,
ತರಬೇತಿ ಕೇಂದ್ರ, ಲಾಲ್ ಬಾಗ್,
ಬೆಂಗಳೂರು,ದಿನಾಂಕ:14-11-2017.

## ಪ್ರಕಟಣೆ

**2017-18 ನೇ ಸಾಲಿನಲ್ಲಿ ತೋಟಗಾರಿಕೆ ಇಲಾಖೆಯಲ್ಲಿ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ 20 ದಿನಗಳ ಭೂದೃಶ್ಯ ತೋಟಗಾರಿಕೆ ಅಭಿವೃದ್ಧಿ ನಿರ್ವಹಣೆ ಬಗ್ಗೆ ತರಬೇತಿಗೆ ಅರ್ಜಿ ಆಹ್ವಾನಿಸುವ ಬಗ್ಗೆ**

*************

2017-18 ನೇ ಸಾಲಿನಲ್ಲಿ ದಿನಾಂಕ:04-12-2017 ರಿಂದ 28-12-2017 ರವರೆಗೆ ತೋಟಗಾರಿಕೆ ತರಬೇತಿ ಕೇಂದ್ರ, ಲಾಲ್ ಬಾಗ್, ಬೆಂಗಳೂರು ಇಲ್ಲಿ ನಡೆಯುವ 20 (ಇಪ್ಪತ್ತು) ದಿನಗಳ ಅವಧಿಯ **ಭೂದೃಶ್ಯ ತೋಟಗಾರಿಕೆ ಅಭಿವೃದ್ಧಿ ಮತ್ತು ನಿರ್ವಹಣೆ ತರಬೇತಿಗೆ ಅಭ್ಯರ್ಥಿಗಳಿಂದ ಅರ್ಜಿ ಗಳನ್ನು ಆಹ್ವಾನಿಸಲಾಗಿದೆ.**

- **ವಿದ್ಯಾರ್ಹತೆ:** ತರಬೇತಿಗೆ ಆಯ್ಕೆಯಾಗಲು ಅಭ್ಯರ್ಥಿಯು ಕನಿಷ್ಠ 5 ನೇ ತರಗತಿ ತೇರ್ಗಡೆಯಾಗಿರಬೇಕು ಕನ್ನಡ ಓದುವುದು, ಬರೆಯುವುದು ಮತ್ತು ಮಾತನಾಡುವುದು ತಿಳಿದಿರಬೇಕು.
- **ವಯೋಮಿತಿ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕನಿಷ್ಠ 18 ವರ್ಷ ಮತ್ತು ಗರಿಷ್ಠ 35 ವರ್ಷ ಮತ್ತು ಇತರರಿಗೆ ಕನಿಷ್ಠ 18 ವರ್ಷ ಮತ್ತು ಗರಿಷ್ಠ 33 ವರ್ಷ.
- ಕೌಶಲ್ಯ ಅಭಿವೃದ್ಧಿ, ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆ ರವರ ಅಧಿಕೃತ ವೆಬ್ ಸೈಟ್ ನಲ್ಲಿ ತೋಟಗಾರಿಕೆ ತರಬೇತಿಗಾಗಿ ದಾಖಲಿಸಿರುವ ಅಭ್ಯರ್ಥಿಗಳಿಗೆ ಮತ್ತು ರೈತ ಮಕ್ಕಳಿಗೆ ಆದ್ಯತೆ ನೀಡಲಾಗುವುದು.
- ಅಭ್ಯರ್ಥಿಗಳನ್ನು ಜೇಷ್ಠತೆ ಆಧಾರದ ಮೇಲೆ ತರಬೇತಿ ಪ್ರವೇಶವನ್ನು ನೀಡಲಾಗುವುದು.
- ಅರ್ಜಿಗಳನ್ನು ಸಹಾಯಕ ತೋಟಗಾರಿಕೆ ನಿರ್ದೇಶಕರು, ತರಬೇತಿ ಕೇಂದ್ರ ಲಾಲ್ ಬಾಗ್, ಬೆಂಗಳೂರು ಅಥವಾ ಇಲಾಖಾ ವೆಬ್ ಸೈಟ್ www.horticulture.kar.nic.in ನಲ್ಲಿ ದಿನಾಂಕ :16-11-2017 ರಿಂದ ದಿ:28-11-2017 ರವರೆಗೆ ಪಡೆಯಬಹುದಾಗಿರುತ್ತದೆ.
- ಅಭ್ಯರ್ಥಿಗಳ ಅರ್ಜಿಗಳ ಪರಿಶೀಲನೆ ಮತ್ತು ಆಯ್ಕೆ ಪಟ್ಟಿ ಪ್ರಕಟಿಸುವ ದಿನಾಂಕ:30-11-2017.
- ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಿಸಿದ ದಾಖಲಾತಿಗಳೊಂದಿಗೆ ದಿನಾಂಕ:28-11-2017 ರಂದು ಸಂಜೆ 5.30 ಗಂಟೆಯೊಳಗೆ ಸಹಾಯಕ ತೋಟಗಾರಿಕೆ ನಿರ್ದೇಶಕರು, ತರಬೇತಿ ಕೇಂದ್ರ ಲಾಲ್ ಬಾಗ್, ಬೆಂಗಳೂರು ರವರ ಕಛೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 9071280906 ಮತ್ತು 080-26564538 ಗಳನ್ನು ಸಂಪರ್ಕಿಸಬಹುದು .

ಸಹಾಯಕ ತೋಟಗಾರಿಕೆ ನಿರ್ದೇಶಕರು,
ತರಬೇತಿ ಕೇಂದ್ರ ಲಾಲ್ ಬಾಗ್.